ಜೆಎಸ್‌ಎಸ್ ಮಹಾವಿದ್ಯಾಪೀಠ

# ಜೆಎಸ್‌ಎಸ್ ಮಹಿಳಾ ಕಾಲೇಜು

ಚಾಮರಾಜನಗರ ವಿಶ್ವವಿದ್ಯಾನಿಲಯಕ್ಕೆ ಸಂಯೋಜಿತ, ನ್ಯಾಕ್‌ನಿಂದ B+ (CGPA: 2.74) ಮಾನ್ಯತೆ ಪಡೆದಿದೆ

**ಕೊಳ್ಳೇಗಾಲ – 571 440 ಚಾಮರಾಜನಗರ ಜಿಲ್ಲೆ**

☎: 08224-252149 🖷: 08224-256051 jsscwk@gmail.com www. jsscwkgl.org

ಕೊಳ್ಳೇಗಾಲ:06.04.2026 ರಂದು ಜೆಎಸ್‌ಎಸ್ ಮಹಿಳಾ ಕಾಲೇಜು, ಕೊಳ್ಳೇಗಾಲ ಐಕ್ಯೂಎಸಿ ಸಹಯೋಗದೊಂದಿಗೆ ಯುವ ರೆಡ್‌ಕ್ರಾಸ್ ಘಟಕದ ವತಿಯಿಂದ "ಸ್ಫೂರ್ತಿ ಸಿಂಚನ" ಎಂಬ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ ಸಂಸ್ಕೃತಿಕ ಚಿಂತಕರು ಶ್ರೀ ಶಂಕರ ದೇವನೂರು ಕಾರ್ಯಕ್ರಮವನ್ನುದ್ದೇಶಿಸಿ "ಬೇರಿನ ನೋವೇ ಹೂವಿನ ನಗೆ. ಶಿಕ್ಷಣವೆಂದರೆ ಆಸ್ತಿ ಸಂಪಾದನೆಯಲ್ಲ, ಸಾಧ್ಯವಾದ ಮನಸ್ಸಿಗೆ ಅಸಾಧ್ಯವಾದುದು ಈ ಜಗತ್ತಿನಲ್ಲಿ ಯಾವುದು ಇಲ್ಲ, ನಮ್ಮ ದೈನಂದಿನ ಚಟುವಟಿಕೆಗಳು ನಮ್ಮ ಭವಿಷ್ಯವನ್ನು ನಿರ್ಧರಿಸುತ್ತದೆ. ಒಂದು ಸಮಾಜವನ್ನು ಮಾನವೀಯ ಬೆಳಕಿನೆಡೆಗೆ ಸಾಗಿಸುವುದೇ ಶಿಕ್ಷಣ. ಪುಸ್ತಕದ ಹಸಿವು ನಮ್ಮದಾಗಬೇಕು, ವಿದ್ಯಾರ್ಥಿಗಳ ಜೀವನ ತಪಸಿದ್ದ ಹಾಗೆ ಇದು ಜ್ಞಾನ ಸಂಪಾದನೆಯ ಕಾಲ ಬುದ್ಧಿಯನ್ನು ಮಸೆದು, ಭಾವನೆಗಳನ್ನು ಕಡಿದು, ಸರಸ್ವತಿಯನ್ನು ನಮ್ಮ ಮನೋಮಂದಿರದಲ್ಲಿ ನೆನೆಯಬೇಕು. ಬಣ್ಣದ ಗುಳ್ಳೆಗಳೊಡನೆ ಕಾಲಹರಣ ಅನಗತ್ಯ. ವಿದ್ಯಾರ್ಥಿಗಳು ಕ್ಷಣಿಕ ಸುಖಕ್ಕೆ ಹಾತೊರೆಯದೇ ಮೌಲ್ಯಯುತ ಬದುಕನ್ನು ರೂಪಿಸಿಕೊಳ್ಳಿ" ಎಂದು ಹೇಳಿ, ಜೆಎಸ್‌ಎಸ್ ಎಂದರೆ ಜ್ಞಾನ ಸಮನ್ವಯ, ಸೇವೆ ಎಂದು ರಾಜೇಂದ್ರ ಶ್ರೀಗಳ ಆಶಯವನ್ನು ತಲುಪಿಸಿದರು.

ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿದ ಕಾಲೇಜಿನ ಪ್ರಾಂಶುಪಾಲರಾದ ಡಾ. ಹೆಚ್.ಎಸ್. ಕೊಂಗಳಪ್ಪ ಇವರು ಮಾತನಾಡಿ "ಒತ್ತಡದ ಬದುಕಿನಲ್ಲಿ ನಿಮಗೆ ಏಕಾಗ್ರತೆ ತುಂಬಾ ಅಗತ್ಯ, ನೊಣದ ಹಾಗೆ ಬದುಕದೇ ಜೇನುನೊಣದ ಹಾಗೆ ಬದುಕಬೇಕು. ನಮ್ಮ ಆಯ್ಕೆಯ ಮೇಲೆ ನಮ್ಮ ಬದುಕು ನಿಂತಿರುತ್ತದೆ" ಎಂದು ಸ್ಫೂರ್ತಿದಾಯಕ ಮಾತುಗಳನ್ನಾಡಿದರು.




ಶ್ರೀ ಶಂಕರ ದೇವನೂರು, ಸಂಸ್ಕೃತಿಕ ಚಿಂತಕರು, ಮೈಸೂರು ರವರು “ಸ್ಪೂರ್ತಿ ಸಿಂಚನ” ಕುರಿತ ವಿಶೇಷ ಉಪನ್ಯಾಸ ನೀಡುತ್ತಿರುವುದು. ಚಿತ್ರದಲ್ಲಿ ಯುವ ರೆಡ್‌ಕ್ರಾಸ್ ಸಂಚಾಲಕರಾದ ಶ್ರೀಮತಿ ಪುಟ್ಟಮ್ಮ, ಪ್ರಾಚಾರ್ಯರಾದ ಡಾ. ಹೆಚ್ ಎಸ್ ಕೊಂಗಳಪ್ಪ ಹಾಗೂ ಐಕ್ಯೂಎಸಿ ಸಂಚಾಲಕರಾದ ಶ್ರೀಮತಿ ಮಮತ ಎಸ್.




ಪ್ರಾಚಾರ್ಯರಾದ ಡಾ. ಹೆಚ್ ಎಸ್ ಕೊಂಗಳಪ್ಪರವರು ಅಧ್ಯಕ್ಷೀಯ ಭಾಷಣ ಮಾಡುತ್ತಿರುವುದು. ಚಿತ್ರದಲ್ಲಿ ಯುವ ರೆಡ್‌ಕ್ರಾಸ್ ಸಂಚಾಲಕರಾದ ಶ್ರೀಮತಿ ಪುಟ್ಟಮ್ಮ, ಶ್ರೀ ಶಂಕರ ದೇವನೂರು, ಸಂಸ್ಕೃತಿಕ ಚಿಂತಕರು, ಮೈಸೂರು ಹಾಗೂ ಐಕ್ಯೂಎಸಿ ಸಂಚಾಲಕರಾದ ಶ್ರೀಮತಿ ಮಮತ ಎಸ್ .